**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.238/2022

ಸಾಕ್ಷಿಯನ್ನು ದಿಃ **26.06.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 1ನೇ ಪ್ರತಿವಾದಿಯರ ಪರಃ ಶ್ರೀ.** MRL **ವಕೀಲರಿಂದ**

ನನ್ನ ಅಣ್ಣಂದಿರು ಸಾಲ ಪಡೆದಿರುವ ವಿಚಾರ ಸಂಬಂಧಿಕರಾದ ರಾಮಚಂದ್ರ ರವರಿಂದ ನನಗೆ ಗೊತ್ತಾಯಿತು. ಕಳೆದ 2-3 ವರ್ಷಗಳಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ ಎಂದು ರಾಮಚಂದ್ರ ರವರು ಹೇಳಿದರು. ಈಗ ತೋರಿಸುತ್ತಿರುವ EC ಪ್ರಕಾರ ನನ್ನ ಅಣ್ಣಂದಿರು ಸರ್ವೆ ನಂ. 246/1 ಮತ್ತು ಸರ್ವೆ ನಂ. 246/2ರ ಬಗ್ಗೆ 2018-19ನೇ ಸಾಲಿನಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿ. ಸದರಿ ದಾಖಲೆಯನ್ನು **ನಿಡಿ-9** ಎಂದು ಗುರುತಿಸಲಾಯಿತು. ಅದಕ್ಕೂ ಪೂರ್ವದಿಂದಲೇ ನನ್ನ ಅಣ್ಣಂದಿರು ಸಾಲ ತೆಗೆದುಕೊಳ್ಳುತ್ತಾ ರಿನಿವಲ್ ಮಾಡುತ್ತಾ ಬಂದಿದ್ದಾರೆ ಎಂದರೆ ಇರಬಹುದು. 1ನೇ ಪ್ರತಿವಾದಿ ಕೂಡ ನಿಡಿ-8ರ ಪ್ರಕಾರ 2015-16ರಲ್ಲಿ 1ನೇ ಪ್ರತಿವಾದಿ ಸರ್ವೆ ನಂ. 246/1 ಹಾಗೂ 246/2ರ ಬಗ್ಗೆ ಸಾಲ ತೆಗೆದುಕೊಳ್ಳುತ್ತಾ ಬಂದಿದ್ದಾರೆ ಎಂದರೆ ಸರಿ. ಈಗ ನೋಡುತ್ತಿರುವ EC ಪ್ರಕಾರ 1ನೇ ಪ್ರತಿವಾದಿ 2018-19ನೇ ಸಾಲ ತೆಗೆದುಕೊಳ್ಳುತ್ತಾ ಬಂದಿದ್ದಾರೆ ಎಂದರೆ ಸರಿ. ಸದರಿ ದಾಖಲೆಯನ್ನು **ನಿಡಿ-10** ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಸರ್ವೆ ನಂ. 246/1 ರ ಮತ್ತು 246/2ರಲ್ಲಿರುವ ಪಹಣಿಗಳಲ್ಲಿ ನನ್ನ ಮತ್ತು ಪ್ರತಿವಾದಿಗಳ ಹೆಸರು ಇದೆ ಎಂದರೆ ಸರಿ. ಸದರಿ ಪಹಣಿಗಳನ್ನು **ನಿಡಿ-11 ಮತ್ತು 12** ಎಂದು ಗುರುತಿಸಲಾಯಿತು. ನಿಪಿ-1ರ ದಾಖಲೆಯಲ್ಲಿ 1ನೇ ಪ್ರತಿವಾದಿಯ ಹೆಸರು ಇರುವ ಪಹಣಿಯನ್ನು ನಾನು ಕೈ ಬಿಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ರ 4ನೇ ಪುಟವನ್ನು ಯಾಕೆ ಹಾಜರುಪಡಿಸಿಲ್ಲ ಎಂದರೆ ನಮಗೆ ವಿರುದ್ಧವಾಗಿರುವ ಕಾರಣ ವಕೀಲರು ಕೈ ಬಿಟ್ಟಿರಬಹುದು. ಅವರ ಹೆಸರು ಪಹಣಿಯಲ್ಲಿ ನಮೂದಾಗಿರುವುದು ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂಬ ಕಾರಣದಿಂದಾಗಿ ಸದರಿ ದಾಖಲೆಯನ್ನು ನಾನು ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2ರ ಕಾಲಂ ನಂ. 12ರಲ್ಲಿ ನನ್ನ ಮತ್ತು ಪ್ರತಿವಾದಿಯರ ಹೆಸರು ನಮೂದು ಇದೆ ಎಂದರೆ ಸರಿ. ನಿಪಿ-1

ಮತ್ತು 2 ರಲ್ಲಿ ಕೊನೆಯ ಹಾಳೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಅದರಂತೆ ಸದರಿ ಸರ್ವೆ ನಂಬರ್ ನಲ್ಲಿ ನಾನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ನಾನು ಮತ್ತು 2 ಮತ್ತು 3ನೇ ಪ್ರತಿವಾದಿಯರು ಅನ್ಯೋನ್ಯತೆಯಿಂದ ಚೆನ್ನಾಗಿದ್ದೇವೆ ಎಂದರೆ ಸರಿ. ನನಗೂ 1ನೇ ಪ್ರತಿವಾದಿಗೂ ಹಾಗೂ ಅವರ ಕುಟುಂಬದವರಿಗೂ ಕಂಡರೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರರು ಸೇರಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಿಪಿ–3ರ ಪ್ರಕಾರ ಪ್ರಕರಣ ದಾಖಲಿಸಿದ್ದೇವು ಎಂದರೆ ಸರಿ. ನಾವೆಲ್ಲರೂ ಸೇರಿ ತೊಂದರೆ ಕೊಡಬೇಕೆಂದು 1ನೇ ಪ್ರತಿವಾದಿಯನ್ನು ಮಾತ್ರ ಪಕ್ಷಗಾರರಾನ್ನಾಗಿ ಮಾಡಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಮರೆಮಾಚುವ ಸಲುವಾಗಿ ನಿಪಿ–1 ಮತ್ತು 2ರ ಕೊನೆಯ ಪುಟಗಳನ್ನು ಉಳಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ಮತ್ತು 2ರ ಕೊನೆಯ ಪುಟಗಳು ನಿಡಿ–11 ಮತ್ತು 12 ರಲ್ಲಿ ಇದ್ದು, ಅದನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ–4ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ತಂದಿದ್ದೇನೆ. ನಿಪಿ–4 ರಲ್ಲಿರುವ ಸರ್ವೆಯನ್ನು ಯಾವಾಗ ಮಾಡಿದ್ದಾರೆ ಎಂದರೆ ಅದು ತುಂಬಾ ಹಳೆಯದ್ದಾಗಿದೆ. ನಿಪಿ–4 ನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿದ್ದೀರಿ ಎಂದರೆ ನನ್ನ ಜಮೀನಿಗೆ ಸಂಬಂಧಿಸಿದ್ದು ಎಂದು ಹಾಜರುಪಡಿಸಿದ್ದೇನೆ. ನಿಪಿ–4ರಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ. ಆದರೆ ನಮ್ಮದೇ ಜಮೀನಾಗಿದೆ. ನಿಪಿ–4ರ ದಾಖಲೆ ದಿಃ 11.05.1945ರ ನಕ್ಷೆ ಎಂದರೆ ಸರಿ. ಅದು ನನ್ನ ತಂದೆಯ ಹೆಸರಿನಲ್ಲಿರುವ ದಾಖಲೆ ಎಂದರೆ ಸರಿ. ನನ್ನ ತಂದೆಯ ಮರಣಾನಂತರ ನಾನು ಮತ್ತು ನನ್ನ ಸಹೋದರರು ಭಾಗ ಮಾಡಿಕೊಂಡಾಗ ಜಮೀನು ಪೋಡಾಗಿ ಪ್ರತ್ಯೇಕ ಪಹಣಿ ಬರುತ್ತಿದೆ ಎಂದರೆ ಸರಿ. 2 ಮತ್ತು 3ನೇ ಪ್ರತಿವಾದಿಯರು ಸಾಲ ತೆಗೆದುಕೊಳ್ಳುವ ಬಗ್ಗೆ ನನ್ನ ಬಳಿ ಹೇಳಿಲ್ಲ. ಅವರವರ ಭಾಗಕ್ಕೆ ಬಂದ ಆಸ್ತಿಗಳಲ್ಲಿ ನನ್ನ ಸಹೋದರರು ಸಾಲ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಇರಬಹುದು. 1ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು ತನ್ನ ಮಕ್ಕಳ ಸಹಾಯದಿಂದ ಫಲವತ್ತಾಗಿ ಚೆನ್ನಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಫಲವತ್ತಾದ ಜಮೀನನ್ನು ಕಬಳಿಸಬೇಕೆಂದು ನಾನು ಮತ್ತು ನನ್ನ ಸಹೋದರರು ಶಾಮಿಲಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಈಗ ನೋಡುತ್ತಿರುವ ದಾಖಲೆಗಳು ಸರ್ವೆ ನಂ. 246/1 ಹಾಗೂ 246/2ಕ್ಕೆ ಸಂಬಂಧಿಸಿದ 3 ಕಂದಾಯ ರಶೀದಿಗಳು ಎಂದರೆ ಸರಿ. ಸದರಿ ದಾಖಲೆಗಳನ್ನು **ನಿಡಿ–13**

**ರಿಂದ 15** ಎಂದು ಗುರುತಿಸಲಾಯಿತು. ಸದರಿ ರಶೀದಿಗಳು 1ನೇ ಪ್ರತಿವಾದಿ ಮತ್ತು ಅವರ ಗಂಡನ ಹೆಸರಿನಲ್ಲಿ ತೆರಿಗೆ ಪಾವತಿಸಿದ ರಶೀದಿ ಎಂದರೆ ಸರಿ. ನನ್ನ ಭಾಗಕ್ಕೆ ಬಂದ ಆಸ್ತಿಯ ಬಗ್ಗೆ ಕಂದಾಯ ಕಟ್ಟಿದ್ದ ರಶೀದಿ ಹಾಜರುಪಡಿಸಲು ತೊಂದರೆ ಇಲ್ಲ. ಕಂದಾಯ ಕಟ್ಟಿದ್ದ ರಶೀದಿಗಳನ್ನು ಹಾಜರುಪಡಿಸಿದರೆ ನಿಜಾಂಶ ತಿಳಿಯುತ್ತದೆ ಎಂದು ಉದ್ದೇಶಪೂರ್ವಕವಾಗಿ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕಾರಣದಿಂದಲೇ ನಾನು ಮತ್ತು ನನ್ನ ಸಹೋದರರು ರಾಜಿ ಮಾಡಿಕೊಂಡಿದ್ದೇವೆ ಎಂದು ಹೇಳಿ ರಾಜಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ರಾಜಿ ಮಾಡಿಕೊಂಡಿರುವುದು ನಿಜವಾಗಿದೆ. 1ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ರಾಜಿ ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ರಾಜಿ ಅರ್ಜಿಯಲ್ಲಿ 1ನೇ ಪ್ರತಿವಾದಿಯ ಆಸ್ತಿಯನ್ನು ಸೇರಿಸಿ ಚಕ್ಕುಬಂಧಿ ನೀಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ 1ನೇ ಪ್ರತಿವಾದಿಯ ಆಸ್ತಿಯನ್ನು ಸೇರಿಸಿ ಸುಳ್ಳು ಚಕ್ಕುಬಂಧಿ ನೀಡಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.